ನನಗೆ ಕಾರು ಮಾಡಿಸಿಕೊಟ್ಟು ಆಫೀಸಿಗೆ ಹೊರಟಿದ್ದ ಜಗದೀಶ ಫೋನಾಯಿಸಿ, 'ಚಿಕ್ಕಿಯನ್ನು ರಾಣೆಬೆನ್ನೂರಿಗೆ ಕರೆದುಕೊಂಡು ಬಂದುಬಿಡು. ನಮ್ಮೊಂದಿಗೇ ಇರಲಿ' ಎಂದು ಹೇಳಿದ್ದು ಚಿಕ್ಕಿಯನ್ನು ನಾನು ನಮ್ಮ ಜೊತೆಯಿರಲು ಒಪ್ಪಿಸಿ ಕರೆತಂದರೆ ತನ್ನ ಅಭ್ಯಂತರವಿರದಿದ್ದರ ಬಗ್ಗೆ ಒತ್ತಿ ಒತ್ತಿ ಹೇಳುವಂತೆ ತೋರಿತು.

ನಮ್ಮ ಕಾರು ಹಾವೇರಿಯನ್ನು ತಲುಪಿ, ಅಲ್ಲಿಂದ ಎಡಕ್ಕೆ ಹೊರಳಿ ಶಿರಸಿಯ ಹಾದಿ ಹಿಡಿಯಿತು. ಅಲ್ಲಿಯೇ ರಸ್ತೆ ಬದಿಯಲ್ಲಿ ಕಬ್ಬಿನ ರಾಶಿ ಹಾಕಿಕೊಂಡು ಕಬ್ಬಿನ ಹಾಲನ್ನು ಹಿಂಡುತ್ತಿರುವ ಸಾಬಣ್ಣನ ಅಂಗಡಿಯಿಂದ ಎರಡು ಲೀಟರ್ ಕ್ಯಾನಿನಲ್ಲಿ ಕಬ್ಬಿನ ಹಾಲನ್ನು ತುಂಬಿಸಿಕೊಂಡೆ. ನನಗೂ ಚಿಕ್ಕಿಗೂ ಕಬ್ಬಿನಹಾಲೆಂದರೆ ಬಹಳ ಪ್ರೀತಿ. ಕಬ್ಬಿನ ಹಾಲನ್ನು ಕುದಿಸಿಟ್ಟುಕೊಂಡು ಬೆಳಗ್ಗೆ ಎದ್ದಕೂಡಲೇ ಎರಡು ಲೋಟ ಕುಡಿಯಬೇಕು, ಅದೆಂತಹ ಸುಖ. ಚಿಕ್ಕಿ ಎಷ್ಟೇ ಚಿಂತೆಯಲ್ಲಿದ್ದರೂ ಕಬ್ಬಿನಹಾಲನ್ನು ನೋಡಿ ಖುಷಿಪಡದೆ ಇರುವವಳಲ್ಲ ಅಂತ ಲೆಕ್ಕಾಚಾರ ನನ್ನದು.

ನಮ್ಮ ಕಾರು ಇನ್ನೆರಡು ತಾಸಿನಲ್ಲಿ ಭೈರುಂಬೆ, ಉಮ್ಮಚಗಿಯನ್ನೆಲ್ಲಾ ದಾಟಿ ಮಂಚಿಕೇರಿಗೆ ಬಂದೇಬಿಟ್ಟಿತು. ಸಾರ್ವಜನಿಕ ಗಣಪತಿ ಕುಳ್ಳಿಸುತ್ತಾರಲ್ಲ ಅಲ್ಲೇ ಮುಂದೆ ಹೋದರೆ ಪಾತಿಚಿಕ್ಕಿಯ ಮನೆ. ಭರ್ಜರಿ ಮನೆ.

ಪಾತಿಚಿಕ್ಕಿ ಗೇಟಿನ ಬಳಿಯೇ ಕಾದು ನಿಂತಿದ್ದಳು, ಹೆಸರಿಗೆ ಗುಲಾಬಿಗಿಡಗಳಿಗೆ ನೀರುಣಿಸುತ್ತಿದ್ದಳು.

'ಚಿಕ್ಕಿ, ಈ ಉರಿಬಿಸಿಲಲ್ಲಿ ಗಿಡಕ್ಕೆ ನೀರು ಹನಿಸುತ್ತಿದ್ದೀಯಾ' ಎಂದು ಕೇಳಿದ್ದು ಬಿಸಿಲಲ್ಲಿ ಗಿಡಗಳಿಗೆ ನೀರುಣಿಸಬಾರದು ಎಂಬ ಆಕ್ಷೇಪಣೆಗಿಂತಲೂ ಚಿಕ್ಕಿ ಬಿಸಿಲಲ್ಲಿ ನಿಂತು ತಲೆತಿರುಗಿಬಿದ್ದರೆ ಎನ್ನುವ ಆತಂಕವೇ ಇತ್ತು ನನ್ನಲ್ಲಿ.

'ಸುಮ್ಮನೆ ನಿಂತು ಕಾಯುವ ಕೆಲಸವಂತೂ ನನ್ನಿಂದಾಗದು ಕಮಲಿ. ಏನಾದರೂ ಉದ್ಯೋಗ ಬೇಕಲ್ಲ ಕಾಯುತ್ತಾ ನಿಂತವಳಿಗೆ' ಎನ್ನುತ್ತಾ ಅಲ್ಲೇ ಜಗುಲಿಯ ಮೇಲೆ ಚಂಬಲ್ಲಿ ತಂದಿಟ್ಟುಕೊಂಡಿದ್ದ ನೀರು ಬೆಲ್ಲವನ್ನು ಕೊಟ್ಟು ಉಪಚರಿಸಿದಳು.

'ಕಮಲಿ, ಯಾಕೋ ನಾಲ್ಕು ದಿನದಿಂದ ನಿನ್ನ ಕಾಕನ ನೆನಪು ಬಹಳ ಕಾಡುತ್ತಿದೆ. ಕುಂತಲ್ಲಿ, ನಿಂತಲ್ಲಿ, ಹೋದಲ್ಲೆಲ್ಲಾ. ಅವನ ಬಡೀಮುಖದಲ್ಲಿ ಪ್ರೀತಿಗಿಂತಲೂ ಹೆಚ್ಚಾಗಿ ಇಣುಕುತ್ತಿದ್ದ ದೈನ್ಯತೆ ಈಗಲೂ ನನ್ನನ್ನು ಅಣುಕಿಸುತ್ತಿದೆ. ಯಾರದೋ ಮನೆಯ ತೋಟ, ಹಿತ್ತಲು–ಬಾಗಿಲು ತನ್ನದೆಂದು ಸ್ವೀಕರಿಸುವ ಮಮಕಾರ ಮದುವೆ ಅಂತಾದ ತಕ್ಷಣವೇ ಬರಬೇಕೆಂದರೆ, ಮದುವೆ ಎನ್ನುವುದು ಮೋಡಿ ಮಾಟವಾಗಿದ್ದರೆ ಖಂಡಿತವಾಗಿಯೂ ಸಾಧ್ಯವಾಗುತ್ತಿತ್ತೇನೋ! ನನಗಾಗ ಹೊಳೆದಿರಲೇ ಇಲ್ಲ. ಅವನ ಮೇಲೆ ಅಧಿಕಾರ ಚಲಾಯಿಸುವ ಹಕ್ಕು ನನಗಿದೆ ಅನ್ನುವ ಹುಂಬತನ ಬೇರೆ. ಅವನನ್ನು ಇನ್ನೊಂದು ಚೂರು ಪ್ರೀತ್ಯಾದರದಿಂದ ಕಂಡಿದ್ದರೆ ಹೀಗೆಲ್ಲ ಊರ ಜನರ ಪೂಜೆಗಳಿಗೆ ಮುಖವೊಡ್ಡುತ್ತಾ, ಊರವರಿಗೆಲ್ಲ ಅಮ್ಮನಾಗುವ ಬದಲು ನನ್ನದೇ ಸಂಸಾರದಲ್ಲಿ ನಾನಿರುತ್ತಿದ್ದೇನೇನೋ!' ಎಂದು ಉಮ್ಮಳಿಸಿದಳು.

ಪಾತಿಚಿಕ್ಕಿಗೆ ಒಂಟಿತನ ಕಾಡುತ್ತಿದೆಯೇ?

